**CC No. 985/2022**

PW- 1

**ದಿನಾಂಕಃ 22-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ Sri. KLH ವಕೀಲರಿಂದಃ**

ನಾನು 2 ನೇ ತರಗತಿಯವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಅಷ್ಟೊಂದು ಸರಿಯಾಗಿ ಓದಲು ಮತ್ತು ಬರೆಯಲು ಬರುವುದಿಲ್ಲ. ದೂರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಆರೋಪಿ ಚಂದರಗಿ ನಿವಾಸಿಯಾಗಿರುತ್ತಾನೆ. ನಾನು ಮುನ್ಯಾಳ ನಿವಾಸಿಯಾಗಿರುತ್ತೇನೆ. ನಮ್ಮ ಊರಿನಿಂದ ಚಂದರಗಿ 30 ಕಿಮೀ ಅಂತರದಲ್ಲಿದೆ. ಚಂದರಗಿಯಲ್ಲಿ ಮಹಾದೇವ ಬೆಳಗಲಿ ಎನ್ನುವವರ ಜಮೀನು ಇದ್ದು, ಮಹಾದೇವ ಬೆಳಗಲಿ ನನಗೆ ಪರಿಚಯವಿದ್ದು, ಆತನ ಮುಖಾಂತರ ಆರೋಪಿ ನನಗೆ 7-8 ವರ್ಷಗಳ ಹಿಂದೆ ಪರಿಚಯವಾಗಿರುತ್ತಾನೆ. ನಾನು ಆಗಾಗ ಚಂದರಗಿಗೆ ಹೋಗುತ್ತಿದ್ದೆನು.

ನನಗೆ 6 ಎಕರೆ ಜಮೀನು ಇರುತ್ತದೆ. ಸದರಿ ದಾಖಲಾತಿಗಳನ್ನು ಮಾನ್ಯ ನ್ಯಾ ಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಆರೋಪಿಗೆ 2020 ರಲ್ಲಿ ಹಣ ಕೊಟ್ಟಿದ್ದು ನಿರ್ದಿಷ್ಟ ದಿನಾಂಕ ಹೇಳಲಾಗುವುದಿಲ್ಲ. ಆರೋಪಿಗೆ ನಾನು ಮುನ್ಯಾಳದಲ್ಲಿ ಹಣ ನೀಡಿದ್ದು, ಆ ಸಮಯದಲ್ಲಿ ಆರೋಪಿ, ಮಹಾದೇವ ಬೆಳಗಲಿ ಮತ್ತು ನಾನು ಇದ್ದೆವು. ಪ್ರಸ್ತುತ ಪ್ರಕರಣ ಹೊರತುಪಡಿಸಿ ನನ್ನ ಮತ್ತು ಆರೋಪಿಯ ನಡುವೆ ಬೇರೆ ಯಾವುದೇ ವ್ಯವಹಾರ ಆಗಿರುವುದಿಲ್ಲ. ನಾನು ಆರೋಪಿಗೆ 5 ಲಕ್ಷ ರೂ. ಹಣ ಕೊಟ್ಟಿರುತ್ತೇನೆ. 5 ಲಕ್ಷ ರೂ. ಹಣ ನನ್ನ ಹತ್ತಿರ ದನ ಮಾರಾಟದಿಂದ, ಕಬ್ಬು ಮತ್ತು ಗೋವಿನ ಜೋಳದ ಮಾರಾಟದಿಂದ ಬಂದಿರುತ್ತದೆ. ಈ ವಿಚಾರವನ್ನು ದೂರಿನಲ್ಲಿ ಬರೆಸಿರುವುದಿಲ್ಲ. ಹಾಗೆ ಬರೆಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಆರೋಪಿಗೆ ಹಣದ ಅಡಚಣೆಗಾಗಿ ನಾನು ಸಾಲ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮಹಾದೇವ ಬೆಳಗಲಿ ಮತ್ತು ಆತನ ಸಂಬಂಧಿಕರು ಸೇರಿಕೊಂಡು ಶಾಹೀರ ಪಾಟೀಲ ಎಂಬ ವ್ಯಕ್ತಿಗೆ ಜಮೀನು ಮಾರಿದ್ದರು ಎಂದರೆ ನನಗೆ ತಿಳಿದಿರುವುದಿಲ್ಲ. ಜಮೀನು ಮಾರಾಟದ ವಿಚಾರವಾಗಿ ಶಾಹೀರ ಪಾಟೀಲ ಮಹಾದೇವ ಬೆಳಗಲಿಗೆ ಹಣ ನೀಡಬೇಕಾಗಿದ್ದು, ಆ ಸಮಯದಲ್ಲಿ ನಾನು ಮತ್ತು ಆರೋಪಿ ಹಿರಿಯತನ ಮಾಡಿದ್ದು, ಆರೋಪಿ ಮತ್ತು ಶಾಹೀರ ಪಾಟೀಲನ ಖಾಲಿ ಚೆಕ್ ನ್ನು ಮಹಾದೇವ ಬೆಳಗಲಿ ಪಡೆದುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಮಹಾದೇವ ಬೆಳಗಲಿಗೆ ಶಾಹೀರ ಪಾಟೀಲ ಕೊಡಬೇಕಾಗಿದ್ದ ಹಣವನ್ನು ವ್ಯವಹಾರವಾದ 15 ದಿನಗಳಲ್ಲಿ ಕೊಟ್ಟಿದ್ದು, ಆ ಚೆಕ್ಕನ್ನು ಮಹಾದೇವ ಬೆಳಗಲಿ ವಾಪಾಸ

**CC No. 985/2022**

PW- 1

ಕೊಟ್ಟಿರುವುದಿಲ್ಲ ಎಂದರೆ ಸದರಿ ವ್ಯವಹಾರ ನನಗೆ ಸಂಬಂಧಪಟ್ಟಿರುವುದಿಲ್ಲ, ಆರೋಪಿ ನನಗೆ ಹಣ ಕೊಡಬೇಕಾಗಿದ್ದರಿಂದ ಚೆಕ್ ಕೊಟ್ಟಿರುತ್ತಾನೆ. ಮಹಾದೇವ ಬೆಳಗಲಿ ಆರೋಪಿಯ ಚೆಕ್ಕನ್ನು ಇಟ್ಟುಕೊಂಡು ಇಂದು ಅಥವಾ ನಾಳೆ ಕೊಡುತ್ತೇನೆ ಎಂದು ಹೇಳಿ ನನ್ನ ಮುಖಾಂತರ ಆರೋಪಿಯ ವಿರುದ್ಧ ಪ್ರಸ್ತುತ ಪ್ರಕರಣ ದಾಖಲಿಸಿರುತ್ತಾನೆ ಎಂದರೆ ಸರಿಯಲ್ಲ.

ನಿಪಿ-1(ಎ) ಸಹಿ ಆರೋಪಿಯದ್ದಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ಅಂಶಗಳನ್ನು ಯಾರು ಬರೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ, ಸಾಕ್ಷಿಯು ಮುಂದುವರೆದು ಆರೋಪಿ ಬರೆದಿರುತ್ತಾನೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿರುವ ಇತರ ಅಂಶಗಳು ಮತ್ತು ನಿಪಿ-1(ಎ) ಸಹಿಯಲ್ಲಿ ವ್ಯತ್ಯಾಸ ಕಂಡುಬರುತ್ತದೆ ಎಂದರೆ ನನಗೆ ತಿಳಿಯುವುದಿಲ್ಲ.

ಆರೋಪಿ ಹೊಲದ ವ್ಯಾಪಾರ ಮಾಡುತ್ತಿದ್ದನು. ಈ ವಿಚಾರವನ್ನು ನನಗೆ ಮಹಾದೇವ ಬೆಳಗಲಿ ಹೇಳಿರುತ್ತಾನೆ. ಆರೋಪಿಗೆ ಹಣ ತೀರುವಳಿ ಮಾಡುವಂತೆ 2 ತಿಂಗಳುಗಳ ನಂತರ ನಾನು ಕೇಳಿರುತ್ತೇನೆ. ಹಾಗೆ ಕೇಳಿದ ನಿರ್ದಿಷ್ಟ ದಿನಾಂಕ ಹೇಳಲಾಗುವುದಿಲ್ಲ. ಆರೋಪಿ ನನಗೆ ನಿಪಿ-1 ಚೆಕ್ಕನ್ನು ಮುನ್ಯಾಳ ಗ್ರಾಮದಲ್ಲಿ ನೀಡಿರುತ್ತಾನೆ. ಆರೋಪಿ ನನಗೆ ನಿಪಿ-1 ಚೆಕ್ಕನ್ನು ಮುನ್ಯಾಳ ಗ್ರಾಮದಲ್ಲಿ ನೀಡಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಚಂದರಗಿಯಲ್ಲಿ 40 ಎಕರೆ ಜಮೀನು ಹೊಂದಿರುತ್ತಾನೆ ಎಂದರೆ ನನಗೆ ತಿಳಿದಿರುವುದಿಲ್ಲ. ಆರೋಪಿ ಆರ್ಥಿಕ ಸ್ಥಿತಿ ಚೆನ್ನಾಗಿರುತ್ತದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು ನ್ಯಾಯಯುತವಾದ ದೃಷ್ಟಿಯಿಂದ ಸಮಯ ನೀಡಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.